## ಕೇಂದ್ರ ಸಂಪುಟ ತೀರ್ಮಾನ ! ಇದು ಎನ್ಆರ್‌ಸಿಯ ಮತ್ತೊಂದು ಮುಖವೆಂದ ಪ್ರತಿಪಕ್ಷಗಳು

# ಏಪ್ರಿಲ್‌ನಿಂದ ಎನ್‌ಪಿಆರ್ ಪರಿಷ್ಕರಣೆ


**ಹೊಸದಿಲ್ಲಿ:** ಮುಂದಿನ ವರ್ಷ ಏಪ್ರಿಲ್‌ನಿಂದ ದೇಶಾದ್ಯಂತ 'ರಾಷ್ಟ್ರೀಯ ಜನಸಂಖ್ಯಾ ನೋಂದಣಿ' (ಎನ್‌ಪಿಆರ್) ಪರಿಷ್ಕರಣೆ ಕಾರ್ಯ ನಡೆಸಲು ಕೇಂದ್ರ ಸಚಿವ ಸಂಪುಟ ಸಭೆ ಮಂಗಳವಾರ ಸಮ್ಮತಿಸಿದೆ.

ದೇಶಾದ್ಯಂತ ಎನ್‌ಆರ್‌ಸಿ ಜಾರಿಗೊಳಿಸುವ ವಿಚಾರವಾಗಿ ಪ್ರತಿರೋಧ ವ್ಯಕ್ತವಾಗುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು, ಅಂತಹ ಯಾವುದೇ ಪ್ರಸ್ತಾವ ಇಲ್ಲ ಎಂದು ಸ್ಪಷ್ಟಪಡಿಸಿದ್ದರು. ಎನ್‌ಪಿಆರ್ ಪರಿಷ್ಕರಣೆಯು ಎನ್‌ಆರ್‌ಸಿ ಪೂರ್ವಭಾವಿ ತಯಾರಿ ಎನ್ನುವ ಆರೋಪ ಪ್ರತಿಪಕ್ಷಗಳಿಂದ ಕೇಳಿಬಂದಿದೆ.

ಈಗಾಗಲೇ ಎನ್‌ಆರ್‌ಸಿ ಜಾರಿಗೊಳಿಸಿರುವ ಅಸ್ಸಾಂ ಹೊರತುಪಡಿಸಿ ಉಳಿದೆಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನಸಂಖ್ಯಾ ನೋಂದಣಿ ನಡೆಯಲಿದೆ. 2021ರ ಜನಗಣತಿಗಾಗಿ 2020ರ ಏಪ್ರಿಲ್ – ಸೆಪ್ಟೆಂಬರ್ ಅವಧಿಯಲ್ಲಿ ಮಾಹಿತಿ ಸಂಗ್ರಹ ನಡೆಯಲಿದ್ದು, ಇದೇ ಸಂದರ್ಭದಲ್ಲೇ 'ಎನ್‌ಪಿಆರ್' ದತ್ತಾಂಶವನ್ನೂ ಕಲೆಹಾಕಲು ಸರಕಾರ ನಿರ್ಧರಿಸಿದೆ. ಈ ಸಂಬಂಧ ಕಳೆದ ಆಗಸ್ಟ್‌ನಲ್ಲೇ ಸರಕಾರ ಗೆಜೆಟ್ ಅಧಿಸೂಚನೆ ಹೊರಡಿಸಿತ್ತು. ಈಗ ಅದಕ್ಕೆ ಸಂಪುಟದ ಸಮ್ಮತಿ ಮುದ್ರೆ ದೊರೆತಿದೆ. ಈ ಉದ್ದೇಶಕ್ಕಾಗಿ 3,941.35 ಕೋಟಿ ರೂ. ನೀಡಲು ಸಂಪುಟ ಸಮ್ಮತಿಸಿದೆ.

ಎನ್‌ಪಿಆರ್‌ನಲ್ಲಿ ದೇಶದ ಎಲ್ಲಾ ಸಾಮಾನ್ಯ ನಿವಾಸಿಗಳ ಮಾಹಿತಿ ಇರಲಿದೆ. ಜನಗಣತಿಯ ಮಾದರಿಯಲ್ಲೇ ಮನೆ ಮನೆಗೆ ಹೋಗಿ ಮಾಹಿತಿ ಕಲೆಹಾಕುವಂತೆಯೇ ಇಲ್ಲೂ ಮಾಹಿತಿ ಸಂಗ್ರಹಿಸಲಾಗುತ್ತದೆ. 1995ರ ಪೌರತ್ವ ಕಾಯಿದೆ ಮತ್ತು ಪೌರತ್ವ (ಪೌರತ್ವ ನೋಂದಣಿ ಮತ್ತು ರಾಷ್ಟ್ರೀಯ ಗುರುತಿನ ಚೀಟಿ ವಿತರಣೆ) ನಿಯಮ 2003ರ ಅಡಿಯಲ್ಲಿ, ಸ್ಥಳೀಯ (ಗ್ರಾಮ/ಪಟ್ಟಣ), ತಾಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ 'ಎನ್‌ಪಿಆರ್' ಸಿದ್ಧಪಡಿಸಲಾಗುತ್ತದೆ. ಭಾರತದ ಪ್ರತಿಯೊಬ್ಬ ಪ್ರಜೆಗೂ 'ಎನ್‌ಪಿಆರ್' ನೋಂದಣಿ ಕಡ್ಡಾಯವಾಗಿದೆ. ದೇಶದ ಪ್ರತಿಯೊಬ್ಬ ಸಾಮಾನ್ಯ ನಿವಾಸಿಯ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು ಇದರ ಉದ್ದೇಶವಾಗಿದೆ.

**ಯುಪಿಎ ಸರಕಾರದ ಯೋಜನೆ:** ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಯೋಜನೆಯನ್ನು 'ಯುಪಿಎ-1' ಸರಕಾರ ಆರಂಭಿಸಿತ್ತು. 2011ರ ಜನಗಣತಿಗಾಗಿ 2010ರಲ್ಲಿ ಮಾಹಿತಿ ಸಂಗ್ರಹದ ವೇಳೆಯೇ 'ಎನ್‌ಪಿಆರ್' ಉದ್ದೇಶಕ್ಕಾಗಿಯೂ ದತ್ತಾಂಶವನ್ನೂ ಸಂಗ್ರಹಿಸಲಾಗಿತ್ತು. 2015ರಲ್ಲಿ ಮನೆ-ಮನೆ ಸಮೀಕ್ಷೆ ಮೂಲಕ ಬಯೋಮೆಟ್ರಿಕ್ ಮಾಹಿತಿ ಸಂಗ್ರಹಿಸಿ ದತ್ತಾಂಶವನ್ನು ಪರಿಷ್ಕರಣೆ ಮಾಡಲಾಗಿತ್ತು. ಪ್ರಸ್ತುತ ಈ ಮಾಹಿತಿಯ ಡಿಜಿಟಲೀಕರಣ ಪೂರ್ಣಗೊಂಡಿದ್ದು, ಅದಕ್ಕೆ ಮತ್ತಷ್ಟು ಪರಿಷ್ಕರಣೆ ಮಾಡಲು ಉದ್ದೇಶಿಸಿರುವುದಾಗಿ ಸರಕಾರ ತಿಳಿಸಿದೆ.



ಎನ್‌ಪಿಆರ್ ಹಾಗೂ ಎನ್‌ಆರ್‌ಸಿ ಎರಡೂ ಭಿನ್ನ ಪ್ರಕ್ರಿಯೆಗಳು. ಇವೆರಡರ ನಡುವೆ ಸಂಪರ್ಕ ಕಲ್ಪಿಸಬಾರದು ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಇದೇ ವೇಳೆ ಅವರು ಎನ್‌ಆರ್‌ಸಿ ವಿಷಯ ಪ್ರಸ್ತಾಪಿಸಿ, ''ಇದನ್ನು ರಾಷ್ಟ್ರಾದ್ಯಂತ ಜಾರಿಗೆ ತರಲಾಗುತ್ತಿದೆ ಎಂಬ ಬಗ್ಗೆ ಚರ್ಚೆ ನಡೆಸುತ್ತಿರುವುದೇ ಅಪ್ರಸ್ತುತ. ರಾಷ್ಟ್ರವ್ಯಾಪಿ ಇದನ್ನು ಜಾರಿಗೊಳಿಸುವ ಬಗ್ಗೆ ಸಚಿವ ಸಂಪುಟದಲ್ಲಾಗಲೀ, ಸಂಸತ್ತಿನಲ್ಲಾಗಲೀ ಚರ್ಚೆಯನ್ನೇ ನಡೆಸಿಲ್ಲ,'' ಎಂದು ಹೇಳಿದ್ದಾರೆ. ಈ ಮೂಲಕ ಅವರು ಪ್ರಧಾನಿ ಮೋದಿ ಅವರು ಎರಡು ದಿನದ ಹಿಂದೆ ನೀಡಿದ್ದ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ.

**ಓವೈಸಿಗೆ ಟಾಂಗ್:** ''ನಾವು ಸೂರ್ಯ ಪೂರ್ವದಲ್ಲಿ ಉದಯಿಸುತ್ತಾನೆ ಎಂದು ಹೇಳಿದರೂ ಅದಕ್ಕೆ ಸಂಸದ ಅಸಾದುದ್ದೀನ್ ಓವೈಸಿ ಸೂರ್ಯ ಪಶ್ಚಿಮದಲ್ಲಿಯೇ ಹುಟ್ಟುವುದು ಎಂದು ವಾದಿಸುತ್ತಾರೆ. ಹಾಗಾಗಿ ಅವರ ಟೀಕೆಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ,'' ಎಂದು ಶಾ ಟಾಂಗ್ ನೀಡಿದ್ದಾರೆ.

> ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಅಡಿ ಸಂಗ್ರಹಿಸಲಾದ ದತ್ತಾಂಶ ಬಳಸಿ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ನಡೆಸುವ ಯಾವುದೇ ಉದ್ದೇಶ ಸರಕಾರದ ಮುಂದಿಲ್ಲ. ದತ್ತಾಂಶ ಪರಿಷ್ಕರಣೆ ಸಂದರ್ಭದಲ್ಲಿ ಬಯೋಮೆಟ್ರಿಕ್ ಮಾಹಿತಿಯನ್ನೂ ಸಂಗ್ರಹಿಸುವುದಿಲ್ಲ. ಇದು ಕೇವಲ ಸ್ವಯಂದೃಢೀಕರಣವೇ ಹೊರತು ಮಾಹಿತಿ ಸಂಗ್ರಹದ ವೇಳೆ ಯಾವುದೇ ದಾಖಲೆ ನೀಡಬೇಕಿಲ್ಲ.
>
> **– ಪ್ರಕಾಶ್ ಜಾವಡೇಕರ್,** ಕೇಂದ್ರ ಸಚಿವ

ಈ ಬಾರಿಯ ಎನ್‌ಪಿಆರ್‌ನಲ್ಲಿ ಕೆಲ ಹೆಚ್ಚುವರಿ ಮಾಹಿತಿ ಸಂಗ್ರಹ ಮಾಡುತ್ತಿರುವುದು ಕುತೂಹಲ ಮೂಡಿಸಿದೆ. ಮನೆ ಮನೆಗೆ ಹೋಗಿ ಸಮೀಕ್ಷೆ ನಡೆಸುವಾಗ ವ್ಯಕ್ತಿಯ ಮಾಹಿತಿಯ ಜತೆಗೆ ಅವರ ಪೋಷಕರ ಜನ್ಮ ದಿನಾಂಕ ಮತ್ತು ಜನ್ಮ ಸ್ಥಳದ ಮಾಹಿತಿ ಪಡೆಯಲಾಗುತ್ತದೆ.

**ದೀದಿ ಆಕ್ಷೇಪ:** ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪೌರತ್ವ ತಿದ್ದುಪಡಿ ಕಾಯಿದೆ, ಎನ್‌ಆರ್‌ಸಿ ಮಾದರಿಯಲ್ಲೇ 'ಎನ್‌ಪಿಆರ್'ಗೂ ಆಕ್ಷೇಪ ವ್ಯಕ್ತಪಡಿಸಿದ್ದು, ದತ್ತಾಂಶ ಪರಿಷ್ಕರಣೆ ಮಾಡುವ ಪ್ರಕ್ರಿಯೆಗೆ ರಾಜ್ಯ ಸರಕಾರ ಸಹಕಾರ ನೀಡುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ ಇದು ರಾಷ್ಟ್ರೀಯ ಪೌರತ್ವ ನೋಂದಣಿಯ ಪೂರ್ವಭಾವಿ ತಯಾರಿ ಎಂದು ಅವರು ಆರೋಪಿಸಿದ್ದಾರೆ.

ಪಶ್ಚಿಮಬಂಗಾಳ ಜತೆಗೆ ಕೇರಳ, ಪಂಜಾಬ್ ಕೂಡಾ ರಾಷ್ಟ್ರೀಯ ಜನಸಂಖ್ಯಾ ನೋಂದಣಿಗೆ ವಿರೋಧ ವ್ಯಕ್ತಪಡಿಸಿವೆ. ಆದರೆ ರಾಷ್ಟ್ರೀಯ ಜನಸಂಖ್ಯಾ ನೋಂದಣಿ ವಿಷಯದಲ್ಲಿ ರಾಜ್ಯ ಸರಕಾರಕ್ಕೆ ಬೇರೆ ಆಯ್ಕೆಗಳಿಲ್ಲ. ಅದನ್ನು ಪ್ರತಿಯೊಬ್ಬ ನಾಗರಿಕನ ನೋಂದಣಿಯಾಗಲೇ ಬೇಕಾಗಿದೆ ಎಂದು ಸರಕಾರ ತಿಳಿಸಿದೆ.

## ಕರ್ನಾಟಕದ 14 ಜಿಲ್ಲೆಗಳಲ್ಲಿ ಅಟಲ್ ಭೂಜಲ ಯೋಜನೆ ಜಾರಿ


### 8 ರಾಜ್ಯಗಳಲ್ಲಿ ಜಾರಿಯಾಗಲಿದೆ ಮಹತ್ವದ ಯೋಜನೆ

**ಹೊಸದಿಲ್ಲಿ:** ಭೂ-ಜಲ ಸಂಪನ್ಮೂಲ ಸಂರಕ್ಷಣೆ, ಸದ್ಬಳಕೆ ಹಾಗೂ ನಿರ್ವಹಣೆ ಉದ್ದೇಶದ 'ಅಟಲ್ ಭೂಜಲ ಯೋಜನೆ'ಯನ್ನು ಕರ್ನಾಟಕ ಸೇರಿದಂತೆ 8 ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ.

ಐದು ವರ್ಷಗಳ ಅವಧಿಯಲ್ಲಿ ಈ ಯೋಜನೆಗಾಗಿ 6,000 ಕೋಟಿ ರೂ. ವೆಚ್ಚ ಮಾಡಲು ಸಂಪುಟ ನಿರ್ಧರಿಸಿದೆ. ಕೇಂದ್ರ ಸರಕಾರ ಮತ್ತು ವಿಶ್ವಬ್ಯಾಂಕ್ 50:50 ಅನುಪಾತದಲ್ಲಿ ಹಣಕಾಸು ಒದಗಿಸಲಿವೆ. ಎಂಟು ರಾಜ್ಯಗಳ 8,350 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಯೋಜನೆ ಜಾರಿಯಾಗಲಿದೆ.

**ಯಾವ ರಾಜ್ಯಗಳು:** ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಹರಿಯಾಣ, ಉತ್ತರ ಪ್ರದೇಶಗಳಲ್ಲಿ ಈ ಯೋಜನೆ ಜಾರಿಗೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

**ಯೋಜನೆ ಜಾರಿ ಹೇಗೆ?:** ಜಲ ಬಳಕೆದಾರರ ಸಂಘಗಳ ರಚನೆ; ಅಂತರ್ಜಲ ದತ್ತಾಂಶದ ಸಂಗ್ರಹ, ನಿರ್ವಹಣೆ ಮತ್ತು ಪ್ರಚಾರ; ಜಲ ಆಯ-ವ್ಯಯ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಲ ಸುರಕ್ಷೆ ಯೋಜನೆಗಳ ರಚನೆ ಮತ್ತು ಅನುಷ್ಠಾನ, ಶಿಕ್ಷಣ-ಸಂವಹನದ ಮೂಲಕ ಜನರಲ್ಲಿ ಅರಿವು ಹೆಚ್ಚಳ ಮುಂತಾದ ಚಟುವಟಿಕೆಗಳ ಮೂಲಕ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ. ಈ ಎಲ್ಲಾ ಚಟುವಟಿಕೆಗಳಲ್ಲಿ ಸ್ಥಳೀಯ ಜನರ



ಸಕ್ರಿಯ ಪಾಲ್ಗೊಳ್ಳುವಿಕೆ ಖಾತ್ರಿಪಡಿಸಿಕೊಳ್ಳುವುದು ಯೋಜನೆಯ ಮುಖ್ಯ ಉದ್ದೇಶ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

**ಕರ್ನಾಟಕದ 14 ಜಿಲ್ಲೆಗಳಲ್ಲಿ ಜಾರಿ:** ದಶಕಗಳಿಂದ ಬರ ಹಾಗೂ ಅತಿಯಾದ ಅಂತರ್ಜಲ ಬಳಕೆಯಿಂದಾಗಿ ಸಂಕಷ್ಟ ಎದುರಿಸುತ್ತಿರುವ ರಾಜ್ಯದ 14 ಜಿಲ್ಲೆಗಳಲ್ಲಿ 'ಅಟಲ್ ಭೂಜಲ' ಯೋಜನೆ ಅನುಷ್ಠಾನಗೊಳ್ಳಲಿದೆ. ಈ ಪೈಕಿ 10ಕ್ಕೂ ಹೆಚ್ಚು ಜಿಲ್ಲೆಗಳು ದಕ್ಷಿಣ ಕರ್ನಾಟಕದ ಭಾಗದವು. 1,199 ಗ್ರಾಮ ಪಂಚಾಯಿತಿಗಳು ಆದ್ಯತೆ ಮೇರೆಗೆ ಆಯ್ಕೆಯಾಗಿವೆ. ಪಾವಗಡ, ಮಧುಗಿರಿ, ಶಿರಾ, ಚಿಕ್ಕನಾಯಕನಹಳ್ಳಿ, ದೊಡ್ಡಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಮುಳಬಾಗಿಲು, ಬಂಗಾರಪೇಟೆ, ಶ್ರೀನಿವಾಸಪುರ, ಹೊಸಕೋಟೆ ಮತ್ತು ಮಾಗಡಿ ಸೇರಿದಂತೆ ತೀವ್ರ ಅಂತರ್ಜಲ ಕೊರತೆ ಎದುರಿಸುತ್ತಿರುವ ತಾಲೂಕುಗಳು ಯೋಜನೆ ಅನುಷ್ಠಾನಗೊಳ್ಳುವ ಪ್ರದೇಶಗಳ ಪಟ್ಟಿಯಲ್ಲಿವೆ ಎಂದು ಮೂಲಗಳು ತಿಳಿಸಿವೆ.

| 5 | 8,350 | 6,000 | 50:50 |
| --- | --- | --- | --- |
| ರಾಜ್ಯಗಳು | ಗ್ರಾ.ಪಂಗಳಲ್ಲಿ ಯೋಜನೆ | [illegible] | [illegible] |